೨) ಶ್ರೀ ಜಗದಾಂಬ ಫ್ರೀ ಬೋರ್ಡಿಂಗ್, ತಾಂಬಾ, ಇಂಡಿ, ತಾಲ್ಲೂಕು, ಬಿಜಾಪುರ.

ಶ್ರೀ ಕೆ.ಆರ್. ಚವಾಣ್	—	ಛೇರ್‌ಮನ್
ಶ್ರೀ ಟಿ.ಬಿ.. ಆಂಗಡಿ	—	ವೈಸ್ ಛೆ ರ್‌ಮನ್
ಶ್ರೀ ಕೆ.ಕೆ. ದೊಡ್ಡಮನಿ	—	ಕಾರ್ಯದರ್ಶಿ
ಶ್ರೀ ಬಿ.ಎ. ಮಾದಾರ	—	ಸದಸ್ಯ
ಶ್ರೀ ಎಸ್.ಎಫ್. ಚವಾಣ	—	"
ಶ್ರೀ ಕೆ.ಎಸ್. ರಾಥೋಡ್	—	"
ಶ್ರೀ ಕೆ.ಸಿ. ರಾಥೋಡ್	—	"

ಹುಬ್ಬಳ್ಳಿಯಲ್ಲಿ ವಿಮಾನ ಇಳಿದಾಣದ ಬಗ್ಗೆ

೭೦೪ (೧೧೪೫) ಶ್ರೀಮತಿ ಲೀಲಾದೇವಿ ಆರ್ ಪ್ರಸಾದ್(ಅಥಣಿ).–ಮಾನ್ಯ **ಲೋಕೋಪಯೋಗಿ** ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ೧೯೬೦ನೇ ಸಾಲಿನಲ್ಲಿ ಹುಬ್ಬಳಿಯಲ್ಲಿ ವಿಮಾನ ಇಳಿದಾಣಕ್ಕೆ ಅನುಮತಿ ದೊರೆತು ಹುಬ್ಬಳ್ಳಿ ಧಾರವಾಡ ನಗರ ಪಾಲಿಕೆಯವರು ೪ ಎಕರೆ ಪ್ರದೇಶವನ್ನು ವಹಿಸಿಕೊಂಡು ನಾಗರೀಕ ವಿಮಾನಯಾನ ಸಂಸ್ಥೆಗೆ ವಹಿಸಿಕೊಟ್ಟಿರುವುದು ಮತ್ತು ಆಯವ್ಯಯದಲ್ಲಿ ಹಣ ದೊರಕಿಸಿ ಕೊಟ್ಟಿರುವುದು ಸರಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಹುಬ್ಬಳ್ಳಿ ನಗರಕ್ಕೆ ವಾಯುಧೂತ ಸೌಲಭ್ಯವನ್ನು ಒದಗಿಸುವುದರ ಬಗ್ಗೆ ಕೇಂದ್ರ ಸರಕಾರದವರ ಅಭಿಪ್ರಾಯವನ್ನು ಸರ್ಕಾರದವರು ತಿಳಿಸುವರೆ :—

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು).—

ಅ) ಬಂದಿದೆ.

ಆ) ಕೇಂದ್ರ ಸರಕಾರದವರು ಹುಬ್ಬಳ್ಳಿಯೂ ಸೇರಿದಂತೆ ವಾಯುದೂತ ಸೌಲಭ್ಯವನ್ನು ಒದಗಿಸುವುದಾಗಿ ಭರವಸೆ ನೀಡಿದ್ದಾರೆ. ಈ ಭರವಸೆಯೊಂದಿಗೆ ರಾಜ್ಯ ಸರ್ಕಾರವು ಹುಬ್ಬಳ್ಳಿ ವಾಯು ನಿಲ್ದಾಣವನ್ನು ರಾಜ್ಯಸರ್ಕಾರದ ಖರ್ಚಿನಿಂದ ಅಭಿವೃದ್ಧಿಗೊಳಿಸಿ ವಾಯು ದೂತ ವಿಮಾನ ಸಂಚಾರಕ್ಕೆ ಬೇಕಾದ ಸೌಲಭ್ಯಗಳನ್ನು ಒದಗಿಸತಕ್ಕದ್ದು ಎಂಬ ಷರತ್ತನ್ನು ಹಾಕಿರುತ್ತಾರೆ. ಈ ಷರತ್ತಾನ್ವಯ ಈಗಾಗಲೇ ಹುಬ್ಬಳ್ಳಿ ವಿಮಾನ ಇಳಿದಾಣದ ಅಭಿವೃದ್ಧಿ ಕಾರ್ಯಗಳನ್ನು ೯೯-೮೫ನೇ ಲಕ್ಷ ರೂ. ಗಳ ವೆಚ್ಚದಲ್ಲಿ ಮಂಜೂರು ಮಾಡಿದೆ. ಈ ಕಾಮಗಾರಿಯನ್ನು ಹುಬ್ಬಳ್ಳಿಯ ಅಧೀಕ್ಷಕ ಅಭಿಯಂತರವರು ಕೈಗೊಂಡಿದ್ದಾರೆ. ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ೧೦.೦೦ ಲಕ್ಷ ರೂಪಾಯಿಯನ್ನು ಒದಗಿಸಲಾಗಿದೆ.

ಮೀಸಲಾತಿ ಹೆಚ್ಚಿಸುವ ಬಗ್ಗೆ

೭೦೫ (೧೫೦೦) ಶ್ರೀ ಗೋಪಾಲ ಪುಕುಂದ ಕಾನಡೆ (ಶಿರಸಿ).—ಮಾನ್ಯ ಸಮಾಜ **ಕಲ್ಯಾಣ** ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಹರಿಜನ-ಗಿರಿಜನರಿಗೆ ಶೇಕಡ ೧೮ ಮೀಸಲಾತಿ ದೊರೆತಿದ್ದು ಯಾವಾಗ ಹಾಗೂ ರಾಜ್ಯದ ಆಂದಿನ ಜನಸಂಖ್ಯೆ ಎಷ್ಟಿತ್ತು ?

ಆ) ಈಗಿನ ಜನಸಂಖ್ಯೆಗೆ ಅನುಗುಣವಾಗಿ ಶೇಕಡ ವಾರನ್ನು ಹೆಚ್ಚಿಸದಿರಲು ಕಾರಣಗಳೇನು ?

ಇ) ಅರ್ಹ ಮೀಸಲಾತಿಯನ್ನು ರಾಜ್ಯದಲ್ಲಿ ಹೆಚ್ಚಿಸಲು ಸರ್ಕಾರದವರು ಹಮ್ಮಿಕೊಂಡಿರುವ ಕಾರ್ಯಕ್ರಮಗಳಾವುವು ?

ಈ) ಮೇಲಿನ ಮೀಸಲಾತಿಯನ್ನು ಯಾವಾಗ ಹೆಚ್ಚಿಸಲಾಗುವುದು?

ಶ್ರೀ ವಿ.ಎಲ್. ಪಾಟೀಲ್ (ಸಮಾಜ ಕಲ್ಯಾಣ ಸಚಿವರು).—

ಅ) ದಿನಾಂಕ ೬-೪-೧೯೫೫ ರಿಂದ ಜಾರಿಗೆ ಬಂದಿದೆ. ೧೯೫೧ರ ಜನಗಣತಿಯ ಪ್ರಕಾರ ಪರಿಶಿಷ್ಟ ಜಾತಿಗೆ ಸೇರಿದವರು ೧೬,೦೮,೮೨೧ ಮತ್ತು ಪರಿಶಿಷ್ಟ ವರ್ಗಕ್ಕೆ ಸೇರಿದ ಜನಸಂಖ್ಯೆ ೧೫,೩೧೦. ಆಂದಿನ ಒಟ್ಟು ಜನಸಂಖ್ಯೆ ೯೦ ೭೪,೯೭೨. ಇದರಲ್ಲಿ ಶೇಕಡ ೧೭.೭೩ ಪರಿಶಿಷ್ಟ ಜಾತಿಯವರು ಮತ್ತು ಶೇಕಡ ೦.೧೭ ಪರಿಶಿಷ್ಟ ವರ್ಗದವರು

ಆ) ೧೯೬೧ರ ಜನಗಣತಿಯ ಪ್ರಕಾರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಶೇಕಡ ವಾರನ್ನು ಹೆಚ್ಚಿಸುವ ಸಾಧ್ಯ-ಸಾಧ್ಯತೆಯ ಪ್ರಸ್ಥಾವನೆಯು ಪರಿಶೀಲನೆಯಲ್ಲಿದೆ.

ಇ) ಸರ್ಕಾರವು ದಿನಾಂಕ ೨೫-೯-೬೪ರ ಆದೇಶದಲ್ಲಿ ಯಾವ ಯಾವ ಇಲಾಖೆಯಲ್ಲಿ ಬೇರೆ ಬೇರೆ ವರ್ಗಗಳ ಹುದ್ದೆಗಳಿಗೆ ಶೇಕಡ ೧೫ ರಷ್ಟು ಪರಿಶಿಷ್ಟ ಜಾತಿ ಮತ್ತು ೩ರಷ್ಟು ಪರಿಶಿಷ್ಟ ವರ್ಗದವರಿಂದ ತುಂಬಲ್ಪಟ್ಟಿಲ್ಲವೊ ಅಂತಹ ಹುದ್ದೆಗಳಿಗೂ ನೇಮಕಾತಿ ಮಾಡಲು, ಪರಿಶಿಷ್ಟ ಜಾತಿ ಶೇಕಡ ೨೦ರಷ್ಟು ಮತ್ತು ಪರಿಶಿಷ್ಟ ವರ್ಗದವರಿಗೆ ಶೇಕಡ ೫ ರಷ್ಟು ಹುದ್ದೆಗಳನ್ನು ಮೀಸಲಿರಿಸಿ ನೇಮಕಾತಿ ಮಾಡಲು ಕ್ರಮ ಕೈಗೊಂಡಿದೆ.

ಈ) ಈ ಬಗ್ಗೆ ವಿಮರ್ಶಿಸಿ ಸೂಕ್ತ ತೀರ್ಮಾನ ಕೈಗೊಳ್ಳಲಾಗುವುದು.

ಘಟಪ್ರಭಾ ನೀರಾವರಿ ಯೋಜನೆಯಲ್ಲಿ ಕೆಲಸ ಕಳೆದುಂ ಕೊಂಡ ಕಾರ್ಮಿಕರು

೭೦೬ (೧೪೨೨) ಶ್ರೀ ಬಾಬುರೆಡ್ಡಿ ಎಂ. ತುಂಗಳ(ಬೀಳಗಿ).—ಮಾನ್ಯ ಲೋಕೋಪಯೋಗಿ, ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ೧-೪-೬೨ಕ್ಕೆ ಅನ್ವಯವಾಗುವಂತೆ ಘಟಪ್ರಭಾ ಎಡದಂಡೆ ಕಾಲುವೆ ನೀರಾವರಿ ಯೋಜನೆಯಲ್ಲಿ ಕೆಲಸ ಕಳೆದುಕೊಂಡ ಕಾರ್ಮಿಕರ ಸಂಖ್ಯೆ ಎಷ್ಟು (ವಿಭಾಗವಾರು ಮಾಹಿತಿ ಒದಗಿಸುವುದು)

ಆ) ಸಾಕಷ್ಟು ಕೆಲಸವಿದ್ದರೂ ಈ ಕಾರ್ಮಿಕರನ್ನು ವಜಾ ಮಾಡಲು ಅಂಥ ಮಹತ್ವದ ಕಾರಣಗಳೇನು ?

ಇ) ಪ್ರತಿಯೊಂದು ಕುಟುಂಬದ ಒಬ್ಬರಿಗೆ ಉದ್ಯೋಗ ಎನ್ನುವ ನೀತಿಗೆ ಇದು ವ್ಯತಿರಿಕ್ತವಾಗಿ ಕಾಣುವುದಿಲ್ಲವೇ ?

ಈ) ಕೆಲವು ಅಧಿಕಾರಿಗಳ ಕುತಂತ್ರದಿಂದ ೧-೪-೬೨ರ ಆಚೆಗೂ ಕೆಲಸ ಮಾಡುತ್ತಿದ್ದ ನೂರಾರು ಕಾರ್ಮಿಕರು ವಜಾ ಆಗಿದ್ದು ಈರೀತಿ ತಪ್ಪು ಮಾಡಿದ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲಾಗಿದೆಯೇ. ಹಾಗಿಲ್ಲದಿದ್ದಲ್ಲಿ, ಅದಕ್ಕೆ ಕಾರಣವೇನು ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು).—

ಅ) ಘಟಪ್ರಭಾ ಎಡದಂಡೆ ಕಾಲುವೆ ನೀರಾವರಿ ಯೋಜನೆಯಲ್ಲಿ ೧-೪-೬೨ರ ನಂತರ ನೇಮಕವಾದ ೨೦೪ ದಿನಗೂಲಿ ಕಾರ್ಮಿಕರು ಕೆಲಸ ಕಳೆದುಕೊಂಡಿರುತ್ತಾರೆ. ವಿಭಾಗವಾರು ಮಾಹಿತಿ.—

೧)	ಘಟಪ್ರಭಾ ಎಡದಂಡೆ ಕಾಲುವೆ ವಿಭಾಗ ನಂ. ೧, ಘಟಪ್ರಭಾ.....	೨೬
೨)	ಘಟಪ್ರಭಾ ಎಡದಂಡೆ ಕಾಲುವೆ ವಿಭಾಗ ನಂ. ೨, ಜಮಖಂಡಿ.....	೨೬
೩)	ಘಟಪ್ರಭಾ ಎಡದಂಡೆ ಕಾಲುವೆ ವಿಭಾಗ ನಂ. ೩, ಬೀಳಗಿ	೧೫೨
	ಒಟ್ಟು	೨೦೪